# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ "ಸಿಹಿನೀರು ಸಿಗಡಿ ಕೃಷಿಗೆ ಪ್ರೋತ್ಸಾಹ-ಪ್ರಾತ್ಯಕ್ಷತೆ" ಕಾರ್ಯಕ್ರಮವನ್ನು 2019-20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ :**
1) ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 30-04-2019 ರಂದು ನಡೆದ ರಾಜ್ಯ ಮಟ್ಟದ ಅನುಮೋದನೆ ಸಮಿತಿಯ ನಡವಳಿಗಳು
2) ಕೃಷಿ ಇಲಾಖೆ ಆದೇಶ ಸಂಖ್ಯೆ.ಎಸಿಎ/ಬಿಜೆಟಿ/1/800-1-57/19-20 ದಿನಾಂಕ 6/9/2019
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ರವರ ಪತ್ರ ಸಂಖ್ಯೆ. ಮೀನಿ/07/ಆರ್‌ಕೆವಿವೈ/2019, ದಿನಾಂಕ: 29-05-2019.

11 FEB 2020

******

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ 2019-20ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನುಗಾರಿಕೆ ಇಲಾಖೆಯಿಂದ ರಾಜ್ಯದಲ್ಲಿ ಸಿಹಿನೀರು ಸಿಗಡಿಯ ಕೃಷಿ-ಪ್ರಾತ್ಯಕ್ಷತೆ ಯೋಜನೆಯನ್ನು ರೂ.250.00 ಲಕ್ಷಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ ಇಲಾಖೆಗೆ 2019-20ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೊದಲನೇ ಕಂತಾಗಿ ರೂ.2.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ರಾಜ್ಯದಲ್ಲಿ ಸಿಹಿನೀರು ಸಿಗಡಿಯ ಕೃಷಿ ಪ್ರಾತ್ಯಕ್ಷತೆ ಯೋಜನೆಯಡಿ ಸಿಹಿನೀರು ಸಿಗಡಿ ಕೃಷಿಯನ್ನು ಪ್ರೋತ್ಸಾಹಿಸಲು ಲಭ್ಯವಿರುವ ಒಳನಾಡು ಹಾಗೂ ಸಿಹಿನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಕೃಷಿಯನ್ನು ಪ್ರೋತ್ಸಾಹಿಸಲು ಪ್ರಾತ್ಯಕ್ಷತೆಯನ್ನು ನಡೆಸಲು ಪ್ರಸ್ತಾವಿಸಲಾಗಿದೆ. 2019-20ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.250.00 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ. ಸದರಿ ಯೋಜನೆಯನ್ನು ಜಾರಿಗೆ ತರಲು ಆಡಳಿತಾತ್ಮಕ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಕ್ರಿಯೆಯನ್ನು ಮುಂದುವರೆಸುತ್ತಾ, 2019-20 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಲಾಶಯ, ಕೆರೆ ಮತ್ತು ಖಾಸಗಿ ಕೊಳಗಳಲ್ಲಿ ಸೀಗಡಿ ಮರಿ ಖರೀದಿಸಲು ಸಹಾಯಧನ ನೀಡಿ ಸಿಹಿನೀರು ಸೀಗಡಿ ಮಿಶ್ರ ಪಾಲನೆಯನ್ನು ಪ್ರಾತ್ಯಕ್ಷತೆ ಮಾದರಿಯಲ್ಲಿ ಪ್ರೋತ್ಸಾಹಿಸಲು ಪ್ರಸ್ತಾಪಿಸಲಾಗಿದೆ.

ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರು, 2019-20 ನೇ ಸಾಲಿನಲ್ಲಿ ಸಿಹಿನೀರು ಸೀಗಡಿ ಕೃಷಿ ಪ್ರಾತ್ಯಕ್ಷತೆ ಎಂಬ ಹೊಸ ಕಾರ್ಯಕ್ರಮವನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

**ಯೋಜನೆಯ ಘಟಕಗಳು ಮತ್ತು ನಿಗದಿಪಡಿಸಿದ ಅನುದಾನ**

| ಘಟಕ ಸಂಖ್ಯೆ. | ವಿವರ | ನಿಗದಪಡಿಸಿರುವ ಗರಿಷ್ಠ ಅನುದಾನ (ರೂ ಲಕ್ಷಗಳಲ್ಲಿ) |
|---|---|---|
| 1 | ಆಯ್ದ ಜಲ ಪ್ರದೇಶಗಳಲ್ಲಿ ಸಿಹಿನೀರು ಸೀಗಡಿ ಬಿತ್ತನೆ | |
| 2 | ಫಲಾನುಭವಿಗಳ ಸ್ವಂತ ಕೊಳಗಳಲ್ಲಿ ಸಿಹಿ ನೀರು ಸೀಗಡಿ ಮಿಶ್ರ ಪಾಲನೆ | 238.00 |
| 3 | ಸಿಹಿ ನೀರು ಸೀಗಡಿ ಕೃಷಿ ಬಗ್ಗೆ ತರಬೇತಿ ಮತ್ತು ಪ್ರಾತ್ಯಕ್ಷತೆ ಕಾರ್ಯಕ್ರಮಗಳ ಆಯೋಜನೆ | 10.00 |
| 4 | ಮೌಲ್ಯಮಾಪನ ಮತ್ತು ವರದಿ ತಯಾರಿಕೆ | 2.00 |
| | ಒಟ್ಟು | 250.00 |

**<u>ಷರತ್ತು ಮತ್ತು ನಿಬಂಧನೆಗಳು</u>**

**ಘಟಕ 1: ಪ್ರಾತ್ಯಕ್ಷತೆಗಾಗಿ ಜಲ ಪ್ರದೇಶಗಳ ಆಯ್ಕೆ ಮಾಡಲು ಕೆಳಕಂಡ ಸಮಿತಿಯನ್ನು ರಚಿಸಲು ಪ್ರಸ್ತಾಪಿಸಿರುತ್ತಾರೆ.**

ಅ) ಪ್ರಾತ್ಯಕ್ಷತೆ ಕೈಗೊಳ್ಳಲು ಸೂಕ್ತ ಜಲ ಪ್ರದೇಶಗಳನ್ನು ಆಯ್ಕೆ ಮಾಡಲು ಸಮಿತಿಯನ್ನು ರಚಿಸಲು ಪ್ರಸ್ತಾಪಿಸಿರುತ್ತಾರೆ. ಸಮಿತಿಯು ಈ ಕೆಳಗಿನ ಅಧಿಕಾರಿ ಹಾಗೂ ಪರಿಣಿತರನ್ನು ಒಳಗೊಂಡಿರುತ್ತದೆಂದು ಪ್ರಸ್ತಾಪಿಸಿರುತ್ತಾರೆ.

| | |
|---|---|
| ಅ. ರಾಜ್ಯ ಮಟ್ಟದ ಅಧಿಕಾರಿ | – ಅಧ್ಯಕ್ಷರು |
| ಆ. ಸಂಬಂಧ ಪಟ್ಟ ಮೀನುಗಾರಿಕೆ ಉಪ ನಿರ್ದೇಶಕರು | – ಸದಸ್ಯರು |
| ಇ. ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿ | – ಸದಸ್ಯರು |
| ಈ. ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿ | – ಸದಸ್ಯರು |
| ಉ. ಸಂಬಂಧಪಟ್ಟ ಸಹಕಾರ ಸಂಘದ ಪ್ರತಿನಿಧಿ | – ಸದಸ್ಯರು |

ಆ) ಪ್ರಾತ್ಯಕ್ಷತೆಗೆ ಸೂಕ್ತ ಜಲಪ್ರದೇಶಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲು ಪ್ರಸ್ತಾಪಿಸಿರುತ್ತಾರೆ.

| ಕ್ರಸಂ. | ಜಲ ಪ್ರದೇಶದ ವಿಧ | ಆಯ್ಕೆ ಮಾಡಬೇಕಾದ ಗರಿಷ್ಠ ಪ್ರಮಾಣ | ಜುವೆನೈಲ್ ಸಿಹಿ ನೀರು ಸೀಗಡಿ ಮರಿ | |
|---|---|---|---|---|
| | | | ದಾಸ್ತಾನು ಪ್ರಮಾಣ ಪ್ರತಿ ಹೆಕ್ಟೇರ್‌ಗೆ | ಗರಿಷ್ಠ ದಾಸ್ತಾನು ಪ್ರಮಾಣ ಪ್ರತಿ ಘಟಕಕ್ಕೆ |
| 1 | ಜಲಾಶಯಗಳು | 20 ಸಂಖ್ಯೆ | 500 | 5,00,000 |
| 2 | ಇಲಾಖಾ ವ್ಯಾಪ್ತಿಕೆರೆಗಳು | 70 ಸಂಖ್ಯೆ | 500 | 40,000 |
| 3 | ಗ್ರಾಮ ಪಂಚಾಯತ್ ಕೆರೆಗಳು | 30 ಸಂಖ್ಯೆ | 1000 | 30,000 |
| 4 | ಖಾಸಗಿ ಕೊಳಗಳು | 50 ಹೆಕ್ಟೇರ್ | 10,000 | 10,000 |

**1) ಇಲಾಖಾ ಕೆರೆಗಳು ಮತ್ತು ಜಲಾಶಯಗಳು**

ಅ. ಈ ಯೋಜನೆಯಡಿ ಆಯ್ಕೆ ಮಾಡಲಾದ ಇಲಾಖಾ ವ್ಯಾಪ್ತಿಗೆ ಒಳಪಡುವ ಕೆರೆ ಮತ್ತು ಜಲಾಶಯಗಳ ಪಟ್ಟಿಯನ್ನು <u>ಅನುಬಂಧ–1 ಮತ್ತು 2</u> ರಲ್ಲಿ ಸಲ್ಲಿಸಿರುತ್ತಾರೆ.

ಆ. ಮೀನುಗಾರರ ಸಹಕಾರ ಸಂಘಗಳು ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್ ಕಂ ಹರಾಜು ಮೂಲಕ ಪಡೆದಿರುವ ಕೆರೆಗಳಿಗೆ ಆದ್ಯತೆ ನೀಡಲು ಪ್ರಸ್ತಾಪಿಸಿರುತ್ತಾರೆ.

ಇ. ಈ ಯೋಜನೆಯಡಿ ಸಂಘಗಳು / ಫಲಾನುಭವಿಯು ಅರ್ಜಿ ಸಲ್ಲಿಸುವ ವರ್ಷದಲ್ಲಿ ಆ ವರ್ಷದ ಗುತ್ತಿಗೆ / ಬಿಡ್ ಮೊತ್ತವನ್ನು ಇಲಾಖೆಗೆ ಪಾವತಿಸಲು ಪ್ರಸ್ತಾಪಿಸಿರುತ್ತಾರೆ.

ಈ. ಜಲ ವಿಸ್ತೀರ್ಣದ ಶೇ.50 ರಷ್ಟು ಭಾಗವನ್ನು ಉಪಯುಕ್ತ ಜಲ ವಿಸ್ತೀರ್ಣ ಎಂದು ಪರಿಗಣಿಸಿ ದಾಸ್ತಾನು ಮಾಡಬೇಕಾದ ಸೀಗಡಿ ಮರಿಗಳ ಪ್ರಮಾಣವನ್ನು ನಿರ್ಧರಿಸಲು ಪ್ರಸ್ತಾಪಿಸಿರುತ್ತಾರೆ.

ಉ. ಜಲಾಶಯಗಳಲ್ಲಿ 2 ಅಥವಾ 3 ಪ್ರತ್ಯೇಕ ಸೂಕ್ತ ಸ್ಥಳಗಳನ್ನು ಆಯ್ಕೆ ಮಾಡಿ ಸಮ ಪ್ರಮಾಣದಲ್ಲಿ ದಾಸ್ತಾನು ಪ್ರಕ್ರಿಯೆ ನಡೆಸಲು ಪ್ರಸ್ತಾಪಿಸಿರುತ್ತಾರೆ.

ಊ. ಜಲಾಶಯಗಳಿಗೆ ದಾಸ್ತಾನು ಮಾಡುವ ಸ್ಥಳಗಳ ನಿಖರ ಅಕ್ಷಾಂಶ ರೇಖಾಂಶ ಮಾಹಿತಿಗಳನ್ನು ಸಂಗ್ರಹಿಸಿ ವಿವರಗಳನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು ಪ್ರಸ್ತಾಪಿಸಿರುತ್ತಾರೆ.

**2) ಗ್ರಾಮ ಪಂಚಾಯತ್ ಕೆರೆಗಳ ಆಯ್ಕೆ**

ಅ. ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಕನಿಷ್ಠ 6 ರಿಂದ 8 ತಿಂಗಳುಗಳ ಕಾಲ 6 ಅಡಿಗಿಂತ ಹೆಚ್ಚು ನೀರಿನಮಟ್ಟ ಹೊಂದಿರುವ ಕೆರೆಗಳನ್ನು ಆಯ್ಕೆ ಮಾಡಲು ಪ್ರಸ್ತಾಪಿಸಿರುತ್ತಾರೆ.

ಆ. ಕನಿಷ್ಟ 2 ಹೆಕ್ಟೇರ್ ನಿಂದ 25 ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣವುಳ್ಳ ಗ್ರಾಮ ಪಂಚಾಯತ್ ಕೆರೆಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲು ಪ್ರಸ್ತಾಪಿಸಿರುತ್ತಾರೆ.

ಇ. ಗ್ರಾಮ ಪಂಚಾಯತ್ ಕೆರೆಗಳ ಆಯ್ಕೆ ಬಗ್ಗೆ ಮೀನುಗಾರಿಕೆ ನಿರ್ದೇಶಕರು ಸೂಕ್ತ ಸುತ್ತೋಲೆ ಹೊರಡಿಸಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ತಲುಪಿಸಿ ಹೆಚ್ಚಿನ ಪ್ರಚಾರ ನೀಡಲು ಪ್ರಸ್ತಾಪಿಸಿರುತ್ತಾರೆ.

ಈ. ಪ್ರಾತ್ಯಕ್ಷತೆಗೆ ಸೂಕ್ತ ಕೆರೆಗಳನ್ನು ಸಮಿತಿಯು ಪರಿಶೀಲಿಸಿ ಅಂತಿಮಗೊಳಿಸಲು ಪ್ರಸ್ತಾಪಿಸಿರುತ್ತಾರೆ.

ಉ. ಇಲಾಖೆ ಕೆರೆ ಮತ್ತು ಜಲಾಶಯಗಳನ್ನು ಸಿಗಡಿ ಮರಿ ದಾಸ್ತಾನು ಮಾಡುವ ಸಮಯದಲ್ಲಿ ಸಮರ್ಪಕವಾಗಿ ನೀರು ಇರದ ಪಕ್ಷದಲ್ಲಿ ಅಥವಾ ಇನ್ನಾವುದೇ ತಾಂತ್ರಿಕ ಕಾರಣಕ್ಕೆ ಉಪಯೋಗಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಬೇರೆ ಜಲಸಂಪನ್ಮೂಲ ಆಯ್ಕೆ ಮಾಡುವ ಅಧಿಕಾರ ಸಂಬಂಧಪಟ್ಟ ಸಮಿತಿಗಳ ಪಾರದರ್ಶಕ ನಿರ್ಣಯಗಳಿಗೆ ನೀಡಲು ಕೋರಿರುತ್ತಾರೆ.

ಊ. ದಾಸ್ತಾನು ಮಾಡುವ ಕೆರೆಗಳ ಮಾಹಿತಿ ಹಾಗೂ ಸ್ಥಳಗಳ ನಿಖರ ಅಕ್ಷಾಂಶ ರೇಖಾಂಶ ಮಾಹಿತಿಗಳನ್ನು ಸಂಗ್ರಹಿಸಿ ವಿವರಗಳನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು ಪ್ರಸ್ತಾಪಿಸಿರುತ್ತಾರೆ.

**ಘಟಕ 2: ಖಾಸಗಿ ಕೊಳಗಳಲ್ಲಿ ಸಿಹಿನೀರು ಸೀಗಡಿ ಮಿಶ್ರ ಪಾಲನೆ ಪ್ರಾತ್ಯಕ್ಷತೆ ಕೈಗೊಳ್ಳುವ ಸಂದರ್ಭದಲ್ಲಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸತಕ್ಕದ್ದು.**

ಅ. ಖಾಸಗಿ ಕೊಳಗಳಲ್ಲಿ ಸಿಹಿನೀರು ಸೀಗಡಿ ಕೃಷಿ ಕೈಗೊಳ್ಳಲು ಭೌತಿಕ ಗುರಿ 50 ಹೆಕ್ಟೇರ್ ನಿಗದಿಪಡಿಸಲು ಪ್ರಸ್ತಾಪಿಸಿರುತ್ತಾರೆ.

ಆ. ಖಾಸಗಿ ಕ್ಷೇತ್ರದ (ಸ್ವಂತ ಕೊಳಗಳಲ್ಲಿ) ಈಗಾಗಲೇ ಗೆಂಡೆ ಮೀನು ಕೃಷಿ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕನಿಷ್ಠ 0.2 ಹೆಕ್ಟೇರ್ ರಿಂದ ಗರಿಷ್ಠ 1 ಹೆಕ್ಟೇರ್ ಜಲವಿಸ್ತೀರ್ಣವರೆಗಿನ ಕೊಳಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲು ವ್ಯಕ್ತಿಗತ ಒಂದು ಹೆಕ್ಟೇರ್ ಮೀರತಕ್ಕದ್ದಲ್ಲ ಎಂದು ಪ್ರಸ್ತಾಪಿಸಿರುತ್ತಾರೆ.

ಇ. ಕೃಷಿ ಭಾಗ್ಯ / ಮಹಾತ್ಮಾ ಗಾಂಧಿ ಉದ್ಯೋಗ ಭರವಸೆ ಯೋಜನೆಗಳಡಿ ನಿರ್ಮಿಸಲಾದ ಕನಿಷ್ಠ 0.2 ಹೆಕ್ಟೇರ್ ರಿಂದ ಗರಿಷ್ಠ 1 ಹೆಕ್ಟೇರ್ ಕೊಳಗಳಿಗೆ ಆದ್ಯತೆ ನೀಡತಕ್ಕದ್ದು. ಈ ಬಗ್ಗೆ ಮೀನುಗಾರಿಕೆ ನಿರ್ದೇಶಕರು ಸೂಕ್ತ ಸುತ್ತೋಲೆ ಹೊರಡಿಸಿ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮೂಲಕ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ತಲುಪಿಸಲು ಹಾಗೂ ಹೆಚ್ಚಿನ ಪ್ರಚಾರ ನೀಡಲು ಪ್ರಸ್ತಾಪಿಸಿರುತ್ತಾರೆ.

ಇ. ಆಸಕ್ತ ಮೀನು ಕೃಷಿಕರನ್ನು ಈ ಯೋಜನೆಯಡಿ ಪರಿಗಣಿಸಲು ಸೂಕ್ತ ಪತ್ರಿಕಾ ಪ್ರಕಟಣೆ ನೀಡಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಪಡೆದು ಆಯ್ಕೆ ಮಾಡಲು ಪ್ರಸ್ತಾಪಿಸಿರುತ್ತಾರೆ.

ಈ. ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುರವರು ಸಿಗಡಿ ಮರಿಗಳ ಸಂಪೂರ್ಣ ದಾಸ್ತಾನು ಪ್ರಕ್ರಿಯೆಯನ್ನು ಮೊಬೈಲ್ ಫೋನ್‌ನಲ್ಲಿ ವಿಡಿಯೋ ಗ್ರಾಫ್ ಮಾಡತಕ್ಕದ್ದು ಹಾಗೂ ಅದರ ಸಾಫ್ಟ್ ಪ್ರತಿಯನ್ನು ಮೀನುಗಾರಿಕೆ ನಿರ್ದೇಶಕರಿಗೆ ಸಲ್ಲಿಸಲು ಪ್ರಸ್ತಾಪಿಸಿರುತ್ತಾರೆ.

ಉ. ಮೀನು ಕೃಷಿಕರು ಸ್ವಂತ ಕೊಳ ಹೊಂದಿರುವ ಬಗ್ಗೆ ಅಥವಾ ಜಾಗವನ್ನು ಕನಿಷ್ಠ 5 ವರ್ಷಗಳ ಗುತ್ತಿಗೆ ಪಡೆದಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ಒದಗಿಸಲು ಪ್ರಸ್ತಾಪಿಸಿರುತ್ತಾರೆ. ಸ್ಥಳೀಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಿಗಡಿ ಕೃಷಿ ಕೈಗೊಳ್ಳಲು ಕೊಳದ ಸೂಕ್ತತೆ ಬಗ್ಗೆ ಧೃಡೀಕರಣ ನೀಡುವುದು.

ಊ. ಆಸಕ್ತ ಕೃಷಿಕರು ವಿವರಗಳನ್ನು ಒಳಗೊಂಡ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಒಟ್ಟು ಯೋಜನಾ ವೆಚ್ಚದಲ್ಲಿ ಸಹಾಯಧನ ಹೊರತುಪಡಿಸಿ ಉಳಿಯುವ ವೆಚ್ಚವನ್ನು ಅರ್ಜಿದಾರರು ಭರಿಸತಕ್ಕದ್ದು. ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಂಪನ್ಮೂಲ ಲಭ್ಯವಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸಲು ಪ್ರಸ್ತಾಪಿಸಿರುತ್ತಾರೆ.

ಋ. ಸ್ವಂತ ಕೊಳಗಳಲ್ಲಿ ಸಿಹಿ ನೀರು ಸೀಗಡಿಯನ್ನು ಗೆಂಡೆ ಮೀನುಗಳೊಂದಿಗೆ ಮಿಶ್ರಪಾಲನೆ ಕೈಗೊಳ್ಳಲು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 10,000 ಜುವೆನೈಲ್ ಸಿಗಡಿ ಮರಿಗಳನ್ನು (juveniles) ನಿಯಮಾನುಸಾರ ಖರೀದಿಸಿ ಬಿತ್ತನೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

**2.1 ಸಿಗಡಿ ಮರಿ ಖರೀದಿ ಮತ್ತು ವಿತರಣೆ:**

ಅ. ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಸೀಗಡಿ ಮರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರನ್ವಯ ಇಲಾಖೆಯು ಖರೀದಿಸಿ ವಿತರಿಸಲು ಕ್ರಮವಹಿಸಲು ಪ್ರಸ್ತಾಪಿಸಿರುತ್ತಾರೆ.

ಆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹೊರಡಿಸಲಾದ ಮಾರ್ಗಸೂಚಿ ಗಳನ್ವಯ ಉತ್ತಮ ಗುಣಮಟ್ಟದ ಸಿಗಡಿ ಮರಿಗಳನ್ನು ಖರೀದಿಸಲು ಪ್ರಸ್ತಾಪಿಸಿರುತ್ತಾರೆ.

ಇ. ಜಲಪ್ರದೇಶದ ಬಳಿ ಸರಬರಾಜಾಗುವ ಜೀವಂತ ಮರಿಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದು.

ಈ. ಸರಬರಾಜಾಗುವ ಮರಿಗಳ ಗುಣಮಟ್ಟ, ಗಾತ್ರ ಅಥವಾ ಪ್ರಮಾಣ, ತೃಪ್ತಿದಾಯಕವಾಗಿಲ್ಲದಿದ್ದಲ್ಲಿ ಅವುಗಳನ್ನು ಭಾಗಶಃ ಅಥವಾ ಪೂರ್ಣವಾಗಿ ತಿರಸ್ಕರಿಸುವ ಅಧಿಕಾರವನ್ನು ದಾಸ್ತಾನು ಸಮಿತಿ ಹೊಂದಿರುತ್ತದೆ.

ಉ. ಜಲಪ್ರದೇಶಗಳಲ್ಲಿ ನಿಗದಿ ಪಡಿಸಲಾದ ಬಿತ್ತನೆ ಕಾರ್ಯವನ್ನು ನಿಗದಿಪಡಿಸಿದ ಅಂತಿಮ ದಿನಾಂಕದೊಳಗೆ ಪೂರ್ಣಗೊಳಿಸತಕ್ಕದ್ದು. ಪೂರ್ಣಗೊಳಿಸದಿದ್ದಲ್ಲಿ, ಆದೇಶವನ್ನು ರದ್ದುಪಡಿಸುವ ಅಥವಾ ಮಾರ್ಪಡಿಸುವ ಅಧಿಕಾರ ಮೀನುಗಾರಿಕೆ ನಿರ್ದೇಶಕರಿಗೆ ಇರುತ್ತದೆ.

ಊ. ದಾಸ್ತಾನು ಮುಕ್ತಾಯಗೊಂಡ ನಂತರ 3 ಕೆಲಸದ ದಿನಗಳೊಳಗೆ, ಸರಬರಾಜಿಗೆ ಸಂಬಂಧಿಸಿದಂತೆ ಕೆಳಕಂಡ ದಾಖಲೆಗಳನ್ನು ಸಂಬಂಧಪಟ್ಟ ಉಸ್ತುವಾರಿ ಅಧೀಕಾರಿಯು ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರಿಗೆ ಸಲ್ಲಿಸುವುದು.

(1) ಇನ್‌ವಾಯ್ಸ್ ಪ್ರತಿ

(2) ಸಾಗಾಣಿಕೆಗೆ ವೇ ಬಿಲ್ / ಟ್ರಿಪ್‌ಶೀಟ್ ಪ್ರತಿ

(3) ಪ್ರತಿ ಲೋಡ್ ನಲ್ಲಿ ಸಾಗಿಸಿದ ಮರಿಗಳ ಸಂಖ್ಯೆಯ ವಿವರ

(4) ಸಂಬಂಧಪಟ್ಟ ತೆರಿಗೆ ರಸೀದಿ ಅಂದರೆ ರಸ್ತೆ ತೆರಿಗೆ

**ಘಟಕ 3: ಸಿಹಿ ನೀರು ಸೀಗಡಿ ಕೃಷಿ ಬಗ್ಗೆ ತರಬೇತಿ**

ಅ. ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಆಯ್ಕೆಗೊಳಿಸಲಾಗುವ ಎಲ್ಲಾ ಮೀನುಗಾರರಿಗೆ / ಮೀನು ಕೃಷಿಕರಿಗೆ 3 ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಪ್ರಸ್ತಾಪಿಸಿರುತ್ತಾರೆ.

ಆ. ಪ್ರತಿ ತರಬೇತಿಗೆ ಕನಿಷ್ಟ 25 ಅಭ್ಯರ್ಥಿ ಒಳಗೊಂಡಂತೆ, 10 ತರಬೇತಿಗಳನ್ನು ತಲಾ ರೂ 1.00 ಲಕ್ಷದ ವೆಚ್ಚದಲ್ಲಿ ಆಯೋಜಿಸುವುದು. ತರಬೇತಿಗಳನ್ನು ಸೂಕ್ತ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಪ್ರಾಯೋಗಿಕ ವಿಧಾನಗಳಿಂದ ನೀಡಲು ಪ್ರಸ್ತಾಪಿಸಿರುತ್ತಾರೆ.

**ಘಟಕ 4: ಮೌಲ್ಯಮಾಪನ ಮತ್ತು ವರದಿ ತಯಾರಿಕೆ**

ಅ. ಯೋಜನೆಯನ್ನು ಅನುಷ್ಠಾನಗೊಳಿಸುವ ವಿವಿಧ ಹಂತಗಳಲ್ಲಿ ಕೈಗೊಳ್ಳುವ ಚಟುವಟಿಕೆಗಳನ್ನು ಹಾಗೂ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಪ್ರತಿ ಮಾಹೆ ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳು ಕ್ರೋಢೀಕರಿಸಿ ಮೀನುಗಾರಿಕೆ ನಿರ್ದೇಶಕರಿಗೆ ಸಲ್ಲಿಸಲು ಪ್ರಸ್ತಾಪಿಸಿರುತ್ತಾರೆ.

ಆ. ಯೋಜನೆ ಅನುಷ್ಠಾನಗೊಳ್ಳುವ ಜಲಪ್ರದೇಶದ ವಿವರಗಳನ್ನು ಆರ್‌ಕೆವಿವೈ ಯೋಜನೆಯ ಭುವನ್ ತಂತ್ರಾಂಶದಲ್ಲಿ ಜಿಯೋ ಟ್ಯಾಗ್ (Geo-Tagging) ಮಾಡುವ ಕಡ್ಡಾಯವಾಗಿ ಅಳವಡಿಸುವುದು

ಇ. ಮೀನುಗಾರಿಕೆ ನಿರ್ದೇಶಕರು ಪತ್ರಿಕಾ ಪ್ರಕಟಣೆಯನ್ನು ಹೊಡರಡಿಸಿ, ಸೂಕ್ತ ಸಂಸ್ಥೆಗಳಿಂದ Expression of Interest (EoI) ಕರೆಯುವ ಮೂಲಕ ಯೋಜನೆಯ ಅನುಷ್ಠಾನದ ಪರಿಣಾಮಗಳು ಮತ್ತು ಯಶೋಗಾಥೆಗಳನ್ನು ತಯಾರಿಸಿ ಸರ್ಕಾರಕ್ಕೆ ವರದಿಸಲ್ಲಿಸುವುದು. ಇದಕ್ಕಾಗಿ ರೂ 5.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

4. ಯೋಜನೆಯ ಪಾರದರ್ಶಕ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ನಮೂನೆಗಳನ್ನು ಮೀನುಗಾರಿಕೆ ನಿರ್ದೇಶಕರು ತಯಾರಿಸಿ ಸುತ್ತೋಲೆ ಮೂಲಕ ಹೊರಡಿಸುವುದು.
5. ಈ ಯೋಜನೆಗೆ ತಗಲುವ ವೆಚ್ಚವನ್ನು 2019-20 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಲೆಕ್ಕಶೀರ್ಷಿಕೆ 2401-00-800-1-57 ಯಡಿ ಒದಗಿಸಿದ ಅನುದಾನ ರೂ.250.00 ಲಕ್ಷಗಳಿಂದ ಭರಿಸಬಹುದಾಗಿದೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-29 ಮೀಇಯೋ 2019, ಬೆಂಗಳೂರು, ದಿನಾಂಕ: 05-02-2020**

ಪ್ರಸ್ತಾವನೆಯಲ್ಲಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರು ನೀಡಿರುವ ಮಾಹಿತಿಯಂತೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಿಹಿನೀರು ಸೀಗಡಿ ಕೃಷಿ ಪ್ರಾತ್ಯಕ್ಷತೆ ಎಂಬ ಕಾರ್ಯಕ್ರಮವನ್ನು ರೂ.250.00 ಲಕ್ಷ (ಎರಡುನೂರ ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ ಅನುದಾನದಲ್ಲಿ ಕೆಳಕಂಡ ಘಟಕಗಳನ್ನೊಳಗೊಂಡಂತೆ ಹಾಗೂ ಪ್ರಸ್ತಾಪಿಸಿರುವ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

**ಯೋಜನೆಯ ಘಟಕಗಳು ಮತ್ತು ನಿಗದಿಪಡಿಸಿದ ಅನುದಾನ**

| ಘಟಕ ಸಂಖ್ಯೆ. | ವಿವರ | ನಿಗದಪಡಿಸಿರುವ ಗರಿಷ್ಟ ಅನುದಾನ (ರೂ ಲಕ್ಷಗಳಲ್ಲಿ) |
|---|---|---|
| 1 | ಆಯ್ದ ಜಲ ಪ್ರದೇಶಗಳಲ್ಲಿ ಸಿಹಿನೀರು ಸೀಗಡಿ ಬಿತ್ತನೆ | 238.00 |
| 2 | ಫಲಾನುಭವಿಗಳ ಸ್ವಂತ ಕೊಳಗಳಲ್ಲಿ ಸಿಹಿ ನೀರು ಸೀಗಡಿ ಮಿಶ್ರ ಪಾಲನೆ | |
| 3 | ಸಿಹಿ ನೀರು ಸೀಗಡಿ ಕೃಷಿ ಬಗ್ಗೆ ತರಬೇತಿ ಮತ್ತು ಪ್ರಾತ್ಯಕ್ಷತೆ ಕಾರ್ಯಕ್ರಮಗಳ ಆಯೋಜನೆ | 10.00 |
| 4 | ಮೌಲ್ಯಮಾಪನ ಮತ್ತು ವರದಿ ತಯಾರಿಕೆ | 2.00 |
| | ಒಟ್ಟು | 250.00 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kamakshi U.A. 5/2/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4. ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5. ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6. ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಶಾಖಾ ರಕ್ಷಾ, ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

## ಆದೇಶ ಸಂಖ್ಯೆ: ಪಸಂಮೀ/ಇ-29/ಮೀಇಯೋ/2019, ಬೆಂಗಳೂರು ದಿನಾಂಕ: 05-02-2020 ರ

### ಅನುಬಂಧ-1

**2019-20ನೇ ಸಾಲಿನ ಸಿಹಿನೀರು ಸೀಗಡಿ ಕೃಷಿ ಪ್ರಾತ್ಯಕ್ಷತೆ ಯೋಜನೆಯ ಆಯ್ಕೆ ಮಾಡಲಾದ ಜಲಾಶಯಗಳ ಪಟ್ಟಿ**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಜಲಾಶಯದ ಹೆಸರು | ಜಲ ವಿಸ್ತೀರ್ಣ | ದಾಸ್ತಾನು ಮಾಡಬಹುದಾದ ಸೀಗಡಿ ಮರಿಗಳ ಸಂಖ್ಯೆ |
|---|---|---|---|---|---|
| 1 | ರಾಮನಗರ | ಮಾಗಡಿ | ಮಂಚನಬೆಲೆ | 334 | 83500 |
| 2 | ಕೋಲಾರ | ಮಾಲೂರು | ಮಾರ್ಕಂಡೇಯ | 155 | 38750 |
| 3 | ತುಮಕೂರು | ಕುಣಿಗಲ್ | ಮಂಗಳ | 246 | 61500 |
| 4 | ತುಮಕೂರು | ಕುಣಿಗಲ್ | ಮಾರ್ಕೋನಹಳ್ಳಿ | 1336 | 250000 |
| 5 | ಬಳ್ಳಾರಿ | ಸಂಡೂರು | ನರಿಹಳ್ಳ | 280 | 70000 |
| 6 | ದಾರವಾಡ | ಕಲಘಟಗಿ | ನೀರಸಾಗರ | 490 | 122500 |
| 7 | ಶಿವಮೊಗ್ಗ | ಶಿವಮೊಗ್ಗ | ತುಂಗಾ | 1631 | 250000 |
| 8 | ಶಿವಮೊಗ್ಗ | ಸಾಗರ | ಲಿಂಗನಮಕ್ಕಿ | 32256 | 250000 |
| 9 | ಮೈಸೂರು | ಹೆಚ.ಡಿ.ಕೋಟೆ | ಕಬಿನಿ | 6092 | 250000 |
| 10 | ಕಲಬುರಗಿ | ಕಲಬುರಗಿ | ಗಂಡೂರಿನಾಲಾ | 664 | 166000 |
| 11 | ಕಲಬುರಗಿ | ಚಿತ್ತಾಪುರ | ಬೆಣ್ಣೆತೋರಾ | 2201 | 250000 |
| 12 | ಹಾಸನ | ಬೇಲೂರು | ಯಗಚಿ | 1961 | 250000 |
| 13 | ಹಾಸನ | ಹಾಸನ | ಹೇಮಾವತಿ | 9162 | 250000 |
| 14 | ಬೆಂಗಳೂರು (ನ) | ಬೆಂಗಳೂರು(ದಕ್ಷಿಣ) | ತಿಪ್ಪಗೊಂಡನಹಳ್ಳಿ | 1162 | 250000 |
| 15 | ಬೆಂಗಳೂರು (ನ) | ಬೆಂಗಳೂರು(ಉತ್ತರ) | ಹೆಸರಘಟ್ಟ | 1260 | 250000 |
| 16 | ಕೊಡಗು | ಸೋಮವಾರಪೇಟೆ | ಹಾರಂಗಿ | 1886 | 250000 |
| 17 | ಮಂಡ್ಯ | ಶ್ರೀರಂಗಪಟ್ಟಣ | ಕೆ.ಆರ್.ಎಸ್ | 12924 | 250000 |
| 18 | ವಿಜಯಪುರ | ಬಸವನಬಾಗೇವಾಡಿ | ಆಲಮಟ್ಟಿ | 48787 | 250000 |
| 19 | ವಿಜಯಪುರ | ಮುದ್ದೇಬಿಹಾಳ | ಬಸವಸಾಗರ | 13048 | 250000 |
| 20 | ಬೆಳಗಾವಿ | ಹುಕ್ಕೇರಿ | ಘಟಪ್ರಭಾ | 7800 | 250000 |
| | | | | **143675** | **4042250** |

Kamakshi U.A.
(ಕಾಮಾಕ್ಷಿ, ಯು.ಎ.) 5/2/2020
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)
05/02/2020

ಆದೇಶ ಸಂಖ್ಯೆ: ಪಸಂಮೀ/ಇ-29/ಮೀಇಯೋ/2019, ಬೆಂಗಳೂರು ದಿನಾಂಕ: 05-02-2020 ರ

ಅನುಬಂಧ-2

| 2019-20ನೇ ಸಾಲಿನ ಸಿಹಿನೀರು ಸೀಗಡಿ ಕೃಷಿ ಪ್ರಾತ್ಯಕ್ಷತೆ ಯೋಜನೆಯ ಆಯ್ಕೆ ಮಾಡಲಾದ ಇಲಾಖಾ ಕೆರೆಗಳ ಪಟ್ಟಿ | | | | | |
|---|---|---|---|---|---|
| ಕ್ರಸಂ | ಜಿಲ್ಲೆ | ತಾಲ್ಲೂಕು | ಕೆರೆಯ ಹೆಸರು | ಜಲ ವಿಸ್ತೀರ್ಣ | ದಾಸ್ತಾನು ಮಾಡಬಹುದಾದ ಸೀಗಡಿ ಮರಿಗಳ ಸಂಖ್ಯೆ |
| 1 | ಶಿವಮೊಗ್ಗ | ಭದ್ರಾವತಿ | ಮತ್ತೂರು ದೊಡ್ಡಕೆರೆ | 70.85 | 25000 |
| 2 | ಶಿವಮೊಗ್ಗ | ಶಿಕಾರಿಪುರ | ಹಳಿಯೂರು ಹುಚ್ಚರಾಯನ ಕೆರೆ | 22.80 | 5700 |
| 3 | ಶಿವಮೊಗ್ಗ | ಭದ್ರಾವತಿ | ಜನ್ನಾಪುರ ಕೆರೆ | 21.85 | 5460 |
| 4 | ಶಿವಮೊಗ್ಗ | ಭದ್ರಾವತಿ | ಆಯನೂರು ಗೌಡನಕೆರೆ | 34.81 | 8700 |
| 5 | ದಾವಣಗೆರೆ | ಜಗಳೂರು | ಸಂಗೇನಹಳ್ಳಿ ಕೆರೆ | 345.00 | 25000 |
| 6 | ದಾವಣಗೆರೆ | ದಾವಣಗೆರೆ | ಕುಂದುವಾಡ ಕೆರೆ | 101.60 | 25000 |
| 7 | ದಾವಣಗೆರೆ | ದಾವಣಗೆರೆ | ಮಾಗನಹಳ್ಳಿ ಕೆರೆ | 67.60 | 25000 |
| 8 | ದಾವಣಗೆರೆ | ಚನ್ನಗಿರಿ | ಕಂಸಾಗರ ಕೆರೆ | 25.00 | 6250 |
| 9 | ಚಿಕ್ಕಮಗಳೂರು | | ಅಯ್ಯನ ಕೆರೆ | 118.00 | 25000 |
| 10 | ಚಿಕ್ಕಮಗಳೂರು | | ಹಳೆಮದಗ ಕೆರೆ | 100.00 | 25000 |
| 11 | ಚಿಕ್ಕಮಗಳೂರು | | ಅಜ್ಜಂಪುರ ಪರ್ವತರಾಯನ ಕೆರೆ | 40.00 | 10000 |
| 12 | ಚಿತ್ರದುರ್ಗ | ಹಿರಿಯೂರು | ಹರ್ತಿಕಟ್ಟೆ | 145.00 | 25000 |
| 13 | ಚಿತ್ರದುರ್ಗ | ಚಳ್ಳಕೆರೆ | ಮೀರಸಾಬಿಹಳ್ಳಿ ಕೆರೆ | 618.35 | 25000 |
| 14 | ಚಿತ್ರದುರ್ಗ | ಚಳ್ಳಕೆರೆ | ನಗರಂಗೆರೆ | 90.08 | 25000 |
| 15 | ತುಮಕೂರು | ಗುಬ್ಬಿ | ಬೆಲವತ್ತ ಕೆರೆ | 84.40 | 25000 |
| 16 | ತುಮಕೂರು | ತಿಪಟೂರು | ಕರಡಾಳು ಕೆರೆ | 54.22 | 25000 |
| 17 | ತುಮಕೂರು | ಗುಬ್ಬಿ | ಅಳಿಲಿಘಟ್ಟ ಊರ ಮುಂದಿನ ಕೆರೆ | 58.00 | 25000 |
| 18 | ತುಮಕೂರು | ಗುಬ್ಬಿ | ಬೆಣ್ಣೂರು ಕೆರೆ | 69.2 | 25000 |
| 19 | ತುಮಕೂರು | ಗುಬ್ಬಿ | ಅಪ್ಪೇನಹಳ್ಳಿ ಕೆರೆ | 39.00 | 9750 |
| 20 | ರಾಮನಗರ | ಮಾಗಡಿ | ಕೆಂಚನಪುರ | 48.00 | 12000 |
| 21 | ರಾಮನಗರ | ಕನಕಪುರ | ಅಣಜವಾಡಿ | 8.00 | 2000 |
| 22 | ಚಿಕ್ಕಬಳ್ಳಾಪುರ | ಗುಡಿಬಂಡೆ | ಹಂಪಸಂದ್ರ ಹೊಸ ಕೆರೆ | 13.22 | 3310 |
| 23 | ಮೈಸೂರು | ಹೆಚ್.ಡಿ.ಕೋಟೆ | ಕರಿಗಳ ಕೆರೆ | 42.61 | 10650 |
| 24 | ಮೈಸೂರು | ಟಿ.ನರಸೀಪುರ | ಸಿಹಳ್ಳಿ ಮಾರೇಗೌಡನಹಳ್ಳಿ ಕೆರೆ | 45.00 | 11250 |
| 25 | ಮೈಸೂರು | ನಂಜನಗೂಡು | ಹರತಲೆ ಕೆರೆ | 38.00 | 9500 |
| 26 | ಚಾಮರಾಜನಗರ | ಚಾಮರಾಜನಗರ | ಕೆರೆಹಳ್ಳಿ ಕೆರೆ | 102.00 | 25000 |
| 27 | ಚಾಮರಾಜನಗರ | ಯಳಂದೂರು | ಗುಂಬಳ್ಳಿ ಕೆರೆ | 102.00 | 25000 |
| 28 | ಚಾಮರಾಜನಗರ | ಗುಂಡ್ಲುಪೇಟೆ | ಅಕ್ಕಲಾಪುರ ಕೆರೆ | 85.00 | 25000 |
| 29 | ಮಂಡ್ಯ | ಮಂಡ್ಯ | ಕಿರಗಂದೂರು ಕೆರೆ | 97.00 | 25000 |
| 30 | ಮಂಡ್ಯ | ಶ್ರೀರಂಗಪಟ್ಟಣ | ಅರಕೆರೆ ದೊಡ್ಡಕೆರೆ | 95.00 | 25000 |

| ಕ್ರಸಂ | ಜಿಲ್ಲೆ | ತಾಲ್ಲೂಕು | ಕೆರೆಯ ಹೆಸರು | ಜಲ ವಿಸ್ತೀರ್ಣ | ದಾಸ್ತಾನು ಮಾಡಬಹುದಾದ ಸೀಗಡಿ ಮರಿಗಳ ಸಂಖ್ಯೆ |
|---|---|---|---|---|---|
| 31 | ಮಂಡ್ಯ | ಮದ್ದೂರು | ಬೆಳತ್ತೂರು ಕೆರೆ | 60.00 | 25000 |
| 32 | ಹಾಸನ | ಬೇಲೂರು | ಹಳೇಬೀಡು ದೊಡ್ಡಕೆರೆ (ದ್ವಾರಸಮುದ್ರ ಕೆರೆ) | 100.00 | 25000 |
| 33 | ಹಾಸನ | ಹಾಸನ | ಹುಣಸಿನಕೆರೆ | 85.60 | 25000 |
| 34 | ಹಾಸನ | ಚನ್ನರಾಯಪಟ್ಟಣ | ನುಗ್ಗೇಹಳ್ಳಿ ಹಿರೇಕೆರೆ | 51.82 | 25000 |
| 35 | ಹಾವೇರಿ | ಹಾವೇರಿ | ಹೆಗ್ಗೇರಿ | 82.47 | 25000 |
| 36 | ಹಾವೇರಿ | ಬ್ಯಾಡಗಿ | ಕಾಗಿನೆಲೆ | 92.00 | 25000 |
| 37 | ಹಾವೇರಿ | ಹಾನಗಲ್ಲ | ಬೆಳಗಾಲಪೇಟೆ ಕೆರೆ | 69.63 | 25000 |
| 38 | ವಿಜಯಪುರ | ವಿಜಯಪುರ | ಮಮದಾಪೂರ ದೊಡ್ಡ ಕೆರೆ | 77.00 | 25000 |
| 39 | ವಿಜಯಪುರ | ಸಿಂದಗಿ | ಬಳಗಾನೂರ ಕೆರೆ | 150.00 | 25000 |
| 40 | ವಿಜಯಪುರ | ವಿಜಯಪುರ | ಭೂತನಾಳ ಕೆರೆ | 171.00 | 25000 |
| 41 | ಬಾಗಲಕೋಟೆ | ಜಮಖಂಡಿ | ತೊದಲಬಾಗಿ ಕೆರೆ | 55.00 | 25000 |
| 42 | ಬಾಗಲಕೋಟೆ | ಹುನಗುಂದ | ಬಿಸನಾಳ ಕೆರೆ | 26.70 | 6680 |
| 43 | ಬಾಗಲಕೋಟೆ | ಬಾದಾಮಿ | ರಂಗಸಮುದ್ರ ಕೆರೆ | 73.00 | 25000 |
| 44 | ಗದಗ | ಶಿರಹಟ್ಟಿ | ಶೆಟ್ಟಿ ಕೆರೆ | 27.87 | 6970 |
| 45 | ಧಾರವಾಡ | ಧಾರವಾಡ | ನರೇಂದ್ರ ಕೆರೆ | 34.63 | 8660 |
| 46 | ಧಾರವಾಡ | ಧಾರವಾಡ | ಮುಗದ ಕೆರೆ | 12.16 | 3040 |
| 47 | ಧಾರವಾಡ | ಧಾರವಾಡ | ಮವಿನಕೊಪ್ಪ ಕೆರೆ | 66.06 | 25000 |
| 48 | ಬೆಳಗಾವಿ | ರಾಮದುರ್ಗ | ಎಂ.ಕಲ್ಲಾಪೂರ | 18.00 | 4500 |
| 49 | ಬೆಳಗಾವಿ | ರಾಮದುರ್ಗ | ಅರಿಬೆಂಚಿ | 16.00 | 4000 |
| 50 | ಬೆಳಗಾವಿ | ಬೈಲಹೊಂಗಲ | ಗದ್ದಿಕೆರೆ | 55.00 | 25000 |
| 51 | ಬೆಳಗಾವಿ | ಬೆಳಗಾವಿ | ಸಿದ್ಧನಬಾವಿ | 15.38 | 3850 |
| 52 | ಬೆಳಗಾವಿ | ಬೆಳಗಾವಿ | ಕೆ.ಕೆ.ಕೊಪ್ಪ | 20.71 | 5180 |
| 53 | ಬೀದರ್ | ಬಸವಕ್ಯಾಣ | ತ್ರಿಪೂರಾಂತ ಕೆರೆ | 90.00 | 25000 |
| 54 | ಬೀದರ್ | ಬಸವಕ್ಯಾಣ | ಬೇಟಬಾಲಕುಂದಾ ಕೆರೆ | 141.58 | 25000 |
| 55 | ಬೀದರ್ | ಬಸವಕ್ಯಾಣ | ಪರ್ತಾಪುರ. ಕೆರೆ | 30.00 | 7500 |
| 56 | ಯಾದಗಿರಿ | ಸುರಪುರ | ಮಾಲಗತ್ತಿ ಕೆರೆ | 64.54 | 25000 |
| 57 | ಯಾದಗಿರಿ | ಶಹಾಪುರ | ಖಾನಾಪುರ ಕೆರೆ | 93.48 | 25000 |
| 58 | ಯಾದಗಿರಿ | ಯಾದಗಿರಿ | ದೊಡ್ಡಕೆರೆ ಯಾದಗಿರಿ | 101.00 | 25000 |
| 59 | ಕಲಬುರಗಿ | ಕಲಬುರಗಿ | ಭೋಸಗಾ ಕೆರೆ | 62.00 | 25000 |
| 60 | ಕಲಬುರಗಿ | ಅಫಜಲಪುರ | ಭೈರಾಮಡಗಿ ಕೆರೆ | 82.60 | 25000 |
| 61 | ಕಲಬುರಗಿ | ಚಿತ್ತಾಪುರ | ಹುಲ್ಸಗುಡ ಕೆರೆ | 49.00 | 12250 |
| 62 | ಕೊಪ್ಪಳ | ಕನಕಗಿರಿ | ಲಕ್ಷ್ಮೀದೇವಿ ಕೆರೆ | 98.00 | 25000 |
| 63 | ಕೊಪ್ಪಳ | ಮಾದಾಪುರ | ಅಬ್ಬಿಗೇರಿ ಕೆರೆ | 49.86 | 12470 |

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಕೆರೆಯ ಹೆಸರು | ಜಲ ವಿಸ್ತೀರ್ಣ | ದಾಸ್ತಾನು ಮಾಡಬಹುದಾದ ಸೀಗಡಿ ಮರಿಗಳ ಸಂಖ್ಯೆ |
|---|---|---|---|---|---|
| 64 | ಕೊಪ್ಪಳ | ಯಲಬುರ್ಗಾ | ಮಲಕಸಮುದ್ರ ಕೆರೆ | 107.24 | 25000 |
| 65 | ಕೊಪ್ಪಳ | | ಗೌರಿಪುರ ಕೆರೆ | 86.31 | 25000 |
| 66 | ರಾಯಚೂರು | | ರಾಜಾಸಾಬ್ ಕೆರೆ | 64.83 | 25000 |
| 67 | ರಾಯಚೂರು | | ಮಾವಿನಕೆರೆ | 135.00 | 25000 |
| 68 | ರಾಯಚೂರು | ಚಿತ್ತಾಪುರ | ಜೂಲಗುಡ್ಡ ಕೆರೆ | 40.52 | 10130 |
| 69 | ರಾಯಚೂರು | | ನಾರಬಂಡಾ ಕೆರೆ | 73.65 | 25000 |
| 70 | ರಾಯಚೂರು | ರಾಮದುರ್ಗ | ದುರ್ಗಕೆರೆ ರಾಮದುರ್ಗ | 49.20 | 12300 |
| | | | | **5560.43** | **1317100** |

Kamakshi U.A
(ಕಾಮಾಕ್ಷಿ ಯು.ಎ.) 5/2/2020

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಮೀನುಗಾರಿಕೆ)

05/02/2020